Online Newspaper Clipping Service
**Dated, Friday, 07th April – 2017**

**ಕನ್ನಡಪ್ರಭ** **Pg.No.06**

ತುಮಕೂರಿನ ಶ್ರೀದೇವಿ, ಕೋಲಾರದ ಸಂಭ್ರಮ್, ದೇವನಹಳ್ಳಿಯ ಆಕಾಶ್ ನಿರ್ಬಂಧ | ಪ್ರಸಕ್ತ ಸಾಲಿನಲ್ಲಿ 450 ಸೀಟು ಖೋತಾ ಸಾಧ್ಯತೆ

# ರಾಜ್ಯದ 3 ವೈದ್ಯಕೀಯ ಕಾಲೇಜು ಪ್ರವೇಶ ಬಂದ್

• **ಲಿಂಗರಾಜು ಕೋರಾ** ಬೆಂಗಳೂರು

ಕಾಲೇಜಿನ ಮೂಲ ಸೌಕರ್ಯದ ಬಗ್ಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುವ ಹಿನ್ನೆಲೆಯಲ್ಲಿ ರಾಜ್ಯದ ಮೂರು ಪ್ರಮುಖ ವೈದ್ಯಕೀಯ ಕಾಲೇಜುಗಳಿಗೆ ಮುಂದಿನ ಎರಡು ವರ್ಷಗಳ ಕಾಲ ವಿದ್ಯಾರ್ಥಿಗಳ ದಾಖಲಾತಿಗೆ ಅವಕಾಶ ನೀಡದಿರಲು ಭಾರತೀಯ ವೈದ್ಯಕೀಯ ಮಂಡಳಿ (ಎಂಸಿಐ) ನಿರ್ಧರಿಸಿದೆ. ಇದರಿಂದಾಗಿ ಪ್ರಸಕ್ತ ಸಾಲಿನ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಮೂರೂ ಕಾಲೇಜುಗಳ ಪಾಲಿನ ಒಟ್ಟು 450 ಸೀಟುಗಳು ಖೋತಾ ಆಗುವ ಸಾಧ್ಯತೆ ಇದೆ.

ತುಮಕೂರಿನ ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ (ಎಸ್‌ಐಎಂಎಸ್), ಕೋಲಾರದ ಸಂಭ್ರಮ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಮತ್ತು ರಿಸರ್ಚ್, ಮತ್ತು ಬೆಂಗಳೂರಿನ ದೇವನಹಳ್ಳಿಯ ಆಕಾಶ್ ಮೆಡಿಕಲ್ ಕಾಲೇಜುಗಳಿಗೆ 2017-18 ಮತ್ತು 2018-19ನೇ ಸಾಲಿನ ಪ್ರವೇಶಕ್ಕೆ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳದಂತೆ ನಿರ್ಬಂಧ ಹೇರಲು ಭಾರತೀಯ ವೈದ್ಯಕೀಯ ಮಂಡಳಿ ತೀರ್ಮಾನಿಸಿದೆ.

ದೆಹಲಿಯಲ್ಲಿ ಜನವರಿ ... ಕಾರ್ಯಕಾರಿ ಸಮಿತಿ ಸ... ಕೈಗೊಳ್ಳಲಾಗಿದ್ದು, ಸಂಬ...

## ಮುಖಸ್ಥರು ದೆಹಲಿಗೆ ದೌಡು

ಈ ಮಧ್ಯೆ ತಮ್ಮ ಕಾಲೇಜುಗಳಿಗೆ ಮುಂದಿನ ಎರಡು ವರ್ಷ ದಾಖಲಾತಿ ನಿರಾಕರಿಸಲು ಎಂಸಿಐ ನಿರ್ಧರಿಸಿರುವ ಬೆನ್ನಲ್ಲೇ ಕಾಲೇಜಿನ ಆಡಳಿತ ಮಂಡಳಿ ಮುಖ್ಯಸ್ಥರು ದೆಹಲಿಗೆ ದೌಡಾಯಿಸಿದ್ದಾರೆ . ಹೇಗಾದರೂ ಮಾಡಿ ಮತ್ತೆ ತಮ್ಮ ಕಾಲೇಜಿಗೆ ವಿದ್ಯಾರ್ಥಿಗಳ ದಾಖಲಾತಿ ಅವಕಾಶ ಪಡೆಯಲು ಸರ್ಕಾರದ ಮಟ್ಟದಲ್ಲಿ ರಾಜಕೀಯ ಮುಖಂಡರ ಮೂಲಕ ಲಾಬಿ ನಡೆಸುತ್ತಿದ್ದಾರೆ ಎಂದು ತಿಳಿದು ಬಂದಿದೆ. ಈ ಮಧ್ಯೆ ಎಂಸಿಐ ನಿರ್ಧಾರದಿಂದ ಪ್ರಸ್ತುತ ಈ ಕಾಲೇಜುಗಳಲ್ಲಿ ಈ ಹಿಂದಿನ ವರ್ಷಗಳಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ, ಅವರು ತಮ್ಮ ವಿದ್ಯಾಭ್ಯಾಸ ಪೂರ್ಣಗೊಳಿಸಬಹುದು ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕನ್ನಡಪ್ರಭ



ತುಮಕೂರಿನ ಶ್ರೀದೇವಿ, ಕೋಲಾರದ ಸಂಭ್ರಮ್, ದೇವನಹಳ್ಳಿಯ ಆಕಾಶ್ ನಿರ್ಬಂಧ | ಪ್ರಸಕ್ತ ಸಾಲಿನಲ್ಲಿ 450 ಸೀಟು ಖೋತಾ ಸಾಧ್ಯತೆ

# ರಾಜ್ಯದ 3 ವೈದ್ಯಕೀಯ ಕಾಲೇಜು ಪ್ರವೇಶ ಬಂದ್

... ವರ್ಷ ದಾಖಲಾತಿ
...ೇಜಿನ ಆಡಳಿತ ಮಂಡಳಿ
...ದರೂ ಮಾಡಿ ಮತ್ತೆ ತಮ್ಮ
...ಕೆಯಲು ಸರ್ಕಾರದ
...ಬಿ ನಡೆಸುತ್ತಿದ್ದಾರೆ ಎಂದು
...ರ ಪ್ರಸ್ತುತ ಈ
...ಪಡೆದು ವ್ಯಾಸಂಗ
...್ಯಯಾಗುವು ದಿಲ್ಲ.
...ು ಎಂದು ವೈದ್ಯಕೀಯ

## 'ಮುನ್ನಾ ಭಾಯಿ' ಮಾದರಿ

ವಿಶೇಷ ಎಂದರೆ, ಈ ಮೂರು ಕಾಲೇಜುಗಳ ಪೈಕಿ ಒಂದು ಕಾಲೇಜಿನಲ್ಲಿ, ಮಾನದಂಡ ಸಮರ್ಪಕವಾಗಿ ಪಾಲಿಸಲಾಗಿದೆ ಎಂದು ತೋರಿಸಲು ಬಾಲಿವುಡ್ ಖ್ಯಾತ ಸಿನಿಮಾ 'ಮುನ್ನಾಭಾಯಿ' ಆಸ್ಪತ್ರೆ ಮಾದರಿಯಲ್ಲಿ ಆರೋಗ್ಯವಂತ ಜನರನ್ನು ಕರೆತಂದು ರೋಗಿಗಳು ಎಂದು ಬಿಂಬಿಸಲಾಗಿತ್ತು. ಅನಾಥಾಶ್ರಮದ ಮಕ್ಕಳನ್ನು ಕರೆತಂದು ಆಸ್ಪತ್ರೆಯಲ್ಲಿ ಅನಾರೋಗ್ಯ ಎಂದು ದಾಖಲು ಮಾಡಲಾಗಿತ್ತು. ಇನ್ನು ಶಸ್ತ್ರಚಿಕಿತ್ಸಾ ಘಟಕದಲ್ಲಿ ಯಾವ ಶಸ್ತ್ರಚಿಕಿತ್ಸೆ ನಡೆಯದಿದ್ದರೂ, ಹಲವು ಆಪರೇಷನ್ ನಡೆದಿದೆ ಎಂದು ತೋರಿಸಲಾಗಿತ್ತು ಎಂದು ಎಂಸಿಐ ಹೇಳಿದೆ. ಹೀಗಾಗಿ ಈ ಮೂರೂ ಕಾಲೇಜುಗಳಿಗೆ ಮುಂದಿನ ಎರಡು ವರ್ಷ ಗಳ ಕಾಲ ವಿದ್ಯಾರ್ಥಿಗಳ ದಾಖಲಾತಿಗೆ ಅವಕಾಶ ನಿರಾಕರಿಸಲು ನಿರ್ಧರಿಸಿದೆ.

ದೆಹಲಿಯಲ್ಲಿ ಜನವರಿ 13ರಂದು ನಡೆದ ಎಂಸಿಐ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಸಂಬಂಧಿಸಿದ ಮಾಹಿತಿಯನ್ನು ಎಂಸಿಐ ವೆಬ್‌ಸೈಟ್‌ನಲ್ಲಿ ಕೂಡ ಪ್ರಕಟಿಸಲಾಗಿದೆ. ಆ ಮಾಹಿತಿ ಪ್ರಕಾರ, ಸಮರ್ಪಕ ಬೋಧನಾ ಸಿಬ್ಬಂದಿ, ವೈದ್ಯಕೀಯ ಸೌಲಭ್ಯ, ಕಟ್ಟಡ ಸೇರಿದಂತೆ ಮೂಲ ಸೌಕರ್ಯಗಳುಎಂಸಿಐಸೂಚಿತಮಾನದಂಡಗಳಂತೆ ಇಲ್ಲದ ಕಾರಣ ಕಳೆದ ವರ್ಷವೇ (2016-17) ವಿದ್ಯಾರ್ಥಿಗಳ ದಾಖಲಾತಿಯನ್ನು ನಿರ್ಬಂಧಿಸಲು ತೀರ್ಮಾನಿಸಲಾಗಿತ್ತು. ಆದರೆ, ಸುಪ್ರೀಂಕೋರ್ಟ್‌ನ ಮೇಲುಸ್ತುವಾರಿ ಸಮಿತಿ ಆದೇಶ ಹಾಗೂ ಕೇಂದ್ರ ಸರ್ಕಾರದ ಸೂಚನೆ ಹಿನ್ನೆಲೆಯಲ್ಲಿ ಮೂಲ ಸೌಕರ್ಯವನ್ನು ಉತ್ತಮಪಡಿಸಲು ಸಮಯಾವಕಾಶವನ್ನು ನೀಡಲಾಗಿತ್ತು. ಹೀಗೆ ಸಮಯಾವಕಾಶ ನೀಡುವ ವೇಳೆ ಹಲವು ಷರತ್ತು

ವಿಧಿಸಿ, ಬ್ಯಾಂಕ್ ಗ್ಯಾರಂಟಿಯನ್ನು ಪಡೆದು ಪ್ರತಿ ಕಾಲೇಜಿಗೆ 150 ವಿದ್ಯಾರ್ಥಿಗಳ ದಾಖಲಾತಿಗೆ ಅವಕಾಶ ನೀಡಲಾಗಿತ್ತು. ಆದರೆ, ಎಂಸಿಐ ನೀಡಿದ್ದ ಕಾಲ ಮಿತಿ ಮುಗಿದರೂ ಕಾಲೇಜುಗಳು ಮಾನದಂಡಗಳನ್ನು ಪರಿಪೂರ್ಣವಾಗಿ ಪಾಲಿಸಿಲ್ಲ ಎಂಬುದು ಎಂಸಿಐ ತಂಡ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಇದು ಬೆಳಕಿಗೆ ಬಂದಿದೆ.